RNU AIR DHARWAD

# MAY 08, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ, I.C.R.C.** ಸಂಸ್ಥಾಪಕ, ಮೊದಲ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ, ಹೆನ್ರಿ ಡ್ಯೂನಾಂಟ್ ಅವರ, ಜನ್ಮ ವಾರ್ಷಿಕೋತ್ಸವದ ಗೌರವಾರ್ಥ, ಇಂದು, ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವಾದ್ಯಂತ ಸಂಘರ್ಷಗಳು, ವಿಪತ್ತುಗಳು ಮತ್ತು ಆರೋಗ್ಯ ತುರ್ತು ಪರಿಸ್ಥಿತಿಗಳಲ್ಲಿ, ಬಾಧಿತರಾದ ಜನರಿಗೆ, ನಿಷ್ಪಕ್ಷಪಾತ ಮಾನವೀಯ ನೆರವು ನೀಡುವ, ಸ್ವಯಂಸೇವಕರ ಪ್ರಯತ್ನಗಳನ್ನು, ಈ ದಿನ ಗೌರವಿಸಲಾಗುತ್ತದೆ.

<><><>

**ಭಾರತದಲ್ಲಿ ಪ್ರಸಾರ ಸೇವೆ ಆರಂಭಗೊಂಡ,** 90ನೇ ವರ್ಷಾಚರಣೆ ನಿಮಿತ್ತ, ಆಕಾಶವಾಣಿ ಧಾರವಾಡ ಕೇಂದ್ರ, ಇಂದು ಬೆಳಗ್ಗೆ 8 ಗಂಟೆಗೆ, ಜನ ಸಹಭಾಗಿತ್ವದಲ್ಲಿ, ತನ್ನ ಆತ್ಮೀಯ ಶ್ರೋತೃಗಳೊಂದಿಗೆ, 'ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್' ಆಯೋಜಿಸಿತ್ತು. ಆಕಾಶವಾಣಿ ಧಾರವಾಡ ಕೇಂದ್ರದ, ಅಭಿಯಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಅರುಣ ಪ್ರಭಾಕರ ಹಾಗೂ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರಾದ, ಮಂಜುಳಾ ಪುರಾಣಿಕ, ಆಕಾಶವಾಣಿ ಧಾರವಾಡ ಕೇಂದ್ರದ ಆವರಣದಲ್ಲಿ, 'ಆಕಾಶವಾಣಿ @90, ಫಿಟ್ ಇಂಡಿಯಾ ವಾಕಥಾನ್'ಗೆ ಚಾಲನೆ ನೀಡಿದರು. ಉತ್ತರಕನ್ನಡ ಜಿಲ್ಲೆ, ಹಳಿಯಾಳದ ಕೆ.ಎಲ್.ಎಸ್. ವಿಶ್ವನಾಥರಾವ ದೇಶಪಾಂಡೆ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದ, ಅಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳು ಸೇರಿದಂತೆ, ವಿಶೇಷ ಆಹ್ವಾನಿತ ಶ್ರೋತೃಗಳು, ಸಾರ್ವಜನಿಕರು, ಆಕಾಶವಾಣಿ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು. ವಾಕಥಾನ್ ನಲ್ಲಿ ಪಾಲ್ಗೊಂಡ, ಆಕಾಶವಾಣಿ ಕೇಳುಗ ಹಾಗೂ ನಿವೃತ್ತ ಪ್ರಾಧ್ಯಾಪಕ ಮೂಲತ: ಬೆಳಗಾವಿ ಜಿಲ್ಲೆ, ರಾಮದುರ್ಗದ, ಪ್ರಸ್ತುತ ಧಾರವಾಡದಲ್ಲಿ ನೆಲೆಸಿರುವ ಸುರೇಶ ಗುದಗನವರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆಯ,** ಪವಿತ್ರ ವಸ್ತ್ರ ಯೋಜನೆಯಡಿ, ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಹೆಗ್ಗೋಡು–ಭೀಮನಕೋಣೆಯ, ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ನೈಸರ್ಗಿಕ ಬಣ್ಣಗಳ, ಹತ್ತಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಹಾಗೂ ಕೊಡು, ಕೊಳ್ಳುವವರ ಸಮಾವೇಶವನ್ನು, ಮೈಸೂರಿನ ವಿಜಯನಗರದ, ಜಗನ್ನಾಥ ಸೆಂಟರ್ ಫಾರ್ ಆರ್ಟ್ ಆಂಡ್ ಕಲ್ಚರ್ ಸಂಸ್ಥೆಯಲ್ಲಿ, ಇಂದಿನಿಂದ, 10 ರ ವರೆಗೆ ಮೂರು ದಿನಗಳ ಕಾಲ ಆಯೋಜಿಸಿದೆ.

<><><>

**ರಾಯಚೂರು- ಯಾದಗಿರಿ ಲೋಕಸಭಾ ವ್ಯಾಪ್ತಿಯ, ರಾಷ್ಟ್ರೀಯ ಹೆದ್ದಾರಿ-150 ‘ಎ’ ಯ,** ಹತ್ತಿಗೂಡೂರು–ತಿಂಥಣಿ ಸೇತುವೆ–ಲಿಂಗಸುಗೂರು ವಿಭಾಗದ ರಸ್ತೆ ಅಗಲೀಕರಣ ಹಾಗೂ ಮರುನಿರ್ಮಾಣ ಕಾಮಗಾರಿಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದು ಸಂಸದ ಜಿ. ಕುಮಾರ ನಾಯಕ ತಿಳಿಸಿದ್ದಾರೆ.

<><><>

**ಪ್ರಸಕ್ತ ಮೇ ತಿಂಗಳು,** ‘ಆರೋಗ್ಯಕರ ದೃಷ್ಟಿ ಮಾಸ’ ಆಚರಿಸಲಾಗುತ್ತಿದೆ. ರಾಷ್ಟ್ರೀಯ ಕಣ್ಣಿನ ಸಂಸ್ಥೆ (NEI) ನೇತೃತ್ವದಲ್ಲಿ, ದೃಷ್ಟಿ ರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು, ಈ ವಾರ್ಷಿಕ ಆಚರಣೆಯನ್ನು ಆಯೋಜಿಸಲಾಗಿದೆ. *ಗ್ಲುಕೋಮಾ* ಮತ್ತು *ಮ್ಯಾಕ್ಯುಲರ್ ಡಿ-ಜೆನರೇಶನ್* ನಂತಹ ಕಾಯಿಲೆಗಳಿಂದ, ದೃಷ್ಟಿ ನ ್ಟವನ್ನು ತಡೆಗಟ್ಟಲು, ಕಣ್ಣಿನ ಸಮಗ್ರ ಪರೀಕ್ಷೆ ಕೈಗೊಳ್ಳಲು, ಜನ ಜಾಗೃತಿ ಮೂಡಿಸಲಾಗುತ್ತಿದೆ.

<><><>

**‘ಸ್ವಚ್ಛ ಭಾರತ ಮಿ ’ನ್’ 2ನೇ ಆವೃತ್ತಿ ಅಡಿ,** ‘ಸ್ವಚ್ಛ ಕಲಬುರ್ಗಿ, ಶಾಶ್ವತ ಸಮೃದ್ಧಿ’ ಎಂಬ ಆಶಯದೊಂದಿಗೆ, ಮಹಾನಗರ ಪಾಲಿಕೆ, ನಾಳೆ ಬೆಳಗ್ಗೆ 7 ಗಂಟೆಗೆ, ಜನ ಜಾಗೃತಿ ಮ್ಯಾರಥಾನ್ ಹಾಗೂ ಸೈಕ್ಲೋಥಾನ್ ಆಯೋಜಿಸಿದೆ. ಕಲಬುರ್ಗಿ ನಗರದ ಜಗತ್ ವೃತ್ತದಲ್ಲಿ, ಸ್ವಚ್ಛತೆಗಾಗಿ ಜನ ಜಾಗೃತಿ ಜಾಥಾಕ್ಕೆ, ಗಣ್ಯರು ಚಾಲನೆ ನೀಡಲಿದ್ದಾರೆ. ಸರ್ದಾರ ವಲ್ಲಭಭಾಯಿ ಪಟೇಲ ವೃತ್ತದಲ್ಲಿ, ಸಮಾರೋಪಗೊಳ್ಳಲಿದೆ.

<><><>

**ಗ್ರಾಮೀಣ ಆಸ್ತಿ ವಹಿವಾಟಿನಲ್ಲಿ ಪಾರದರ್ಶಕತೆ,** ಅಕ್ರಮ ತಡೆ ಮತ್ತು ಅಧಿಕೃತ ಮಾಲಿಕತ್ವದ ದಾಖಲೆ ಒದಗಿಸಲು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ‘ಇ-ಸ್ವತ್ತು’ ಅಭಿಯಾನ ಆರಂಭಿಸಿದೆ ಎಂದು, ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಆನ್‌ಲೈನ್ ಅರ್ಜಿ ಸಲ್ಲಿಸಿ, ಡಿಜಿಟಲ್ ಪ್ರಮಾಣ ಪತ್ರವನ್ನು ಪಡೆಯಬಹುದು. ಗ್ರಾಮ ಒನ್ ಕೇಂದ್ರ, ಕರ್ನಾಟಕ ಒನ್ ಕೇಂದ್ರ, ಬೆಂಗಳೂರು ಒನ್ ಕೇಂದ್ರಗಳಲ್ಲಿಯೂ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಇ-ಸ್ವತ್ತು ಸಹಾಯವಾಣಿ ಸಂಖ್ಯೆ 94834 76000 ಕರೆ ಮಾಡಿ, ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು, ಎಕ್ಸ್ ಮಾಧ್ಯಮದಲ್ಲಿ ಹೇಳಿದ್ದಾರೆ.

<><><>

**ರಾಜ್ಯಪಾಲ ಥಾವರಚಂದ ಗೆಹ್ಲೋಟ್,** ಸನಾತನ ಪ್ರತಿಷ್ಠಾನದ, ಮಹಾತ್ಮ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ಪ್ರದಾನಿಸಿ, ಗೌರವಿಸಿದರು.

<><><>

**ಶಿವಮೊಗ್ಗ ಜಿಲ್ಲೆ, ಸೊರಬ ತಾಲೂಕಿನ,** ಚಿಟ್ಟೂರು ಗ್ರಾಮದಲ್ಲಿ ಮೀನು ಶಿಕಾರಿ, ಕೆರೆ ಬೇಟೆ ಭರ್ಜರಿಯಾಗಿ ಜರುಗಿತು. ಕೆರೆಬೇಟೆಯಲ್ಲಿ ಕೂಣಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಚಿಟ್ಟೂರು ಗ್ರಾಮಸ್ಥರು ಸೇರಿದಂತೆ, ಸಮೀಪವರ್ತಿ ಗ್ರಾಮಗಳ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದರು.

<><><>

**ಧಾರವಾಡ ರಂಗಾಯಣ,** ಕಾಲೇಜು ರಂಗೋತ್ಸವ ಹಾಗೂ ರಂಗಧ್ವನಿಯನ್ನು ಆಯೋಜಿಸಲಿದೆ ಎಂದು, ರಂಗಾಯಣದ ನೂತನ ನಿರ್ದೇಶಕ ಝೂಕಿರ್ ನದಾಫ್ ತಿಳಿಸಿದ್ದಾರೆ.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>